ದಿನಾಂಕ 27-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ ಎ.ಎಮ್.ಪಿ ವಕೀಲರಿಂದ.**

ರಿನಿವ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಎಷ್ಟು ಸಬ್ಸಿಡಿಯರಿ ಕಂಪನಿಗಳು ಇರುತ್ತವೆ ನನಗೆ ಗೊತ್ತಿಲ್ಲ. ರಿನಿವ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಇರುವ ಸಬ್ಸಿಡಿಯರಿ ಕಂಪನಿಗಳಲ್ಲಿ ಒಂದು ಕಂಪನಿಯ ಹೆಸರು ಅಗ್ನಿ ಪವರ್ ಪ್ರೈವೇಟ್ ಲಿಮಿಟೆಡ್ ಆಗಿರುತ್ತದೆ, ಇನ್ನು ಕೆಲವು ಸಬ್ಸಿಡಿಯರಿ ಕಂಪನಿಗಳ ಹೆಸರು ರಿನಿವ್ ಸೂರ್ಯ ಒಜೇಸ್ ಪ್ರೈವೇಟ್ ಕಂಪನಿ, ವಾದಿ ಕಂಪನಿ, ರಿನಿವ್ ಭೂಮಿ ಪ್ರಕಾಶ ಪ್ರೈವೇಟ್ ಲಿಮಿಟೆಡ್ ಗಳು ಇರುವುದು ನನಗೆ ಗೊತ್ತಿದೆ. ಪ್ರತ್ಯೇಕ ಸಬ್ಸಿಡಿಯರಿ ಕಂಪನಿಗೆ ಪ್ರತ್ಯೇಕವಾಗಿ ಬೋರ್ಡ ಆಫ ಡೈರಕ್ಟರ್ಸ ಇರುತ್ತಾರೆ. ನಿಪಿ-1 ವಾದಿ ಕಂಪನಿಯ ರಿಜಲೂಷನ್ ಆಗಿರುತ್ತದೆ. ನಿಪಿ-1 ಅಗ್ನಿ ಪವರ್ ಪ್ರೈವೇಟ್ ಲಿಮಿಟೆಡ್ ಮತ್ತು ರಿನಿವ್ ಸೂರ್ಯ ಒಜೇಸ್ ಪ್ರೈವೇಟ್ ಕಂಪನಿ, ರಿನಿವ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿ ಮತ್ತು ರಿನಿವ್ ಭೂಮಿ ಪ್ರಕಾಶ ಪ್ರೈವೇಟ್ ಲಿಮಿಟೆಡ್ ಗಳಿಗೆ ಸಂಬಂಧಿಸಿರುವುದಿಲ್ಲ ಕೇವಲ ವಾದಿ ಕಂಪನಿಗೆ ಮಾತ್ರ ಸಂಬಂಧಿಸಿರುತ್ತದೆ. ದಿನಾಂಕ 26-03-2016 ರಂದು ವಾದಿ ಕಂಪನಿಗೆ ಲೇಟರ್ ಆಫ್ ಅವಾರ್ಡ ಸಿಕ್ಕಿದ್ದು ದಿನಾಂಕ 26-09-2017 ರಂದು 20 ಮೆಗಾ ವ್ಯಾಟ್ ಪ್ರೊಜೆಕ್ಟನ್ನು ನಾವು ಹಿರೇಬೂದುರು ಗ್ರಾಮದಲ್ಲಿ ಜಾರಿಗೊಳಿಸಿದ್ದು ಈ ಎರಡು ತಾರೀಖುಗಳ ಮಧ್ಯೆ ಯಾವಾಗ ನಮಗೆ ಹೇಮನಾಳ ಗ್ರಾಮದಲ್ಲಿ 20 ಮೆಗಾವ್ಯಾಟ್ ಪ್ರೊಜೆಕ್ಟನ್ನು ಜಾರಿಗೊಳಿಸಲು ಆಗುವುದಿಲ್ಲವೆಂದು ಗೊತ್ತಾಗಿರುತ್ತದೆ ಎಂದರೆ ಈ ವಿಷಯ ನಮಗೆ ಆಗಸ್ಟ 2016 ರಲ್ಲಿ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. 2016 ಆಗಸ್ಟನಲ್ಲಿ ಹೇಮನಾಳ ಗ್ರಾಮದಲ್ಲಿ ಪ್ರೊಜೆಕ್ಟನ್ನು ಜಾರಿಗೊಳಿಸಲು ಬರುವುದಿಲ್ಲ ಎಂದು ಗೊತ್ತಾದ ನಂತರವು ಸಹ ಹೇಮನಾಳ ಗ್ರಾಮದ ಜಮೀನುಗಳ ಬಗ್ಗೆ ನಾವು ಅಗ್ರಿಮೆಂಟ್‌ನ್ನು ಮಾಡಿಕೊಂಡಿರುತ್ತೇವೆ. ಜಮೀನನ್ನು ಖರೀದಿ ಮಾಡಲು ನಾವು ಯಾವಾಗ ಡಿ.ಸಿ ಯವರ ಕಡೆ ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸಿರುತ್ತೇವೆ ಎಂಬುದರ ಬಗ್ಗೆ ದಿನಾಂಕವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾವು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು 2017 ರಲ್ಲಿ ಸಲ್ಲಿಸಿದ್ದು ತಿಂಗಳು ನೆನಪಿಲ್ಲ. ನಮ್ಮ ವಾದ ಪತ್ರದ 28 ನೇ ಖಂಡಿಕೆಯಲ್ಲಿ ಜಮೀನುಗಳನ್ನು ಖರೀದಿ ಮಾಡಲು ನಾವು ಜಿಲ್ಲಾಧಿಕಾರಿಗಳಿಗೆ ದಿನಾಂಕ 30-03-2017 ರಂದು ಅರ್ಜಿಯನ್ನು ಸಲ್ಲಿಸಿದ್ದು ಅದರ ಮೇಲೆ ಯಾವುದೇ ಆದೇಶ ಆಗಿರುವುದಿಲ್ಲ ನಂತರ ನಾವು ಮತ್ತೆ ದಿನಾಂಕ 18-06-2018 ರಂದು ಪರವಾನಿಗೆ ಕೋರಿ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ದಿನಾಂಕ 18-06-2018 ರಂದು ಸಲ್ಲಿಸಿರುವುದಾಗಿ ಮತ್ತು ಆ ಅರ್ಜಿಯ ಮೇಲೆ ಇದುವರೆಗೂ ಯಾವುದೇ ಆದೇಶ ಆಗಿಲ್ಲ ಎಂದು ಬರೆಯಲಾಗಿದೆ ಎಂದರೆ ನಿಜ. 2016 ರಲ್ಲಿ 20

ಮೆಗಾ ವ್ಯಾಟ್ ಪ್ರೊಜೆಕ್ಟನ್ನು ಹೇಮನಾಳ ಗ್ರಾಮದಲ್ಲಿ ಜಾರಿಗೊಳಿಸಲು ಬರುವುದಿಲ್ಲವೆಂದು ನಮಗೆ ಗೊತ್ತಾಗಿದ್ದು ಆದರೂ ಸಹ 2017 ಮತ್ತು 2018 ರಲ್ಲಿ ಜಮೀನುಗಳ ಖರೀದಿಗೆ ಪರವಾನಿಗೆ ಕೋರಿ ಯಾವ ಕಾರಣಕ್ಕಾಗಿ ಡಿ.ಸಿ ಯವರಿಗೆ ಅರ್ಜಿ ಸಲ್ಲಿಸಿರುತ್ತಿರಿ ಎಂದರೆ 2016 ಆಗಸ್ಟ ಮತ್ತು 2017 ರಲ್ಲಿಯೇ ನಾವು 50 ಎಕರೆ ಜಮೀನುಗಳ ಖರೀದಿ ಬಗ್ಗೆ ಅಗ್ರೀಮೆಂಟ್‌ನ್ನು ಮಾಡಿಕೊಂಡಿದ್ದೇವು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಿನಾಂಕ 26-04-2019 ರಂದು ಸತೀಶ ತಂದೆಸ ಭಾಸ್ಕರರಾವ್ ಹಾಗೂ ವಾದಿಯ ಕಂಪನಿ ಪರವಾಗಿ ನಾನು ಸೇರಿ ಸುವರ್ಣಮ್ಮ ಗಂಡ ಬಸನಗೌಡ ಎಂಬುವವರಿಗೆ ಹೇಮನಾಳ ಗ್ರಾಮದ ಸರ್ವೆ ನಂಬರ 74/*/1 ವಿಸ್ತೀರ್ಣ 7 ಎಕರೆ 39 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಒಂದು ಕ್ರಯಪತ್ರವನ್ನು ಮಾಡಿಕೊಟ್ಟಿದ್ದನ್ನು ಸಾಕ್ಷಿ ದೃಢೀಕೃತ ಕ್ರಯಪತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು, ಸಾಕ್ಷಿ ಮುಂದುವರೆದು ನಾವು ನಿಡಿ-1 ನ್ನು ಮಾಡಲು ಕಾರಣ ಏನೆಂದರೆ ಸರ್ವೆ ನಂಬರಗಳು ಬದಲಾಗಿ ಜಮೀನನ್ನು ಪಕ್ಷಗಾರ ಬೇರೆಯವರಿಗೆ ಮಾರಾಟ ಮಾಡುವ ಸಾಧ್ಯತೆ ಇರುತ್ತದೆ ಆದಕಾರಣ ಅದನ್ನು ತಪ್ಪಿಸಲು ಕಂಪನಿ ಸೂಚಿಸಿದವರಿಗೆ ಜಮೀನನ್ನು ಮಾರಾಟ ಮಾಡಿ ದಾವೆಗಳು ಮುಕ್ತಾಯಗೊಂಡ ನಂತರ ಅವರಿಂದ ಸದರಿ ಜಮೀನನ್ನು ವಾಪಸ್ಸು ಪಡೆಯಲಾಗುತ್ತದೆ ಎಂದು ಹೇಳುತ್ತಾರೆ. ನಿಡಿ-1 ರ ಜಮೀನು ಈ ದಾವೆ ಮತ್ತು ಓ.ಎಸ್ ನಂಬರ 15/2021 ಮತ್ತು 16/2021 ರ ದಾವೆಗಳ ದಾವಾ ಆಸ್ತಿ ಅಲ್ಲ ಎಂದರೆ ನಿಜ. ನಿಡಿ-1 ನ್ನು ಮಾಡಲು ನಾವು ಖರೀದಿದಾರರಿಂದ ಎಷ್ಟು ಹಣ ಪಡೆಯಲಾಗಿದೆ ಎಂಬುದನ್ನು ನಿಡಿ-1 ರಲ್ಲಿ ತೋರಿಸಿರುತ್ತೆವೆ ಗೊತ್ತಿಲ್ಲ. ನಿಡಿ-1 ರಲ್ಲಿ ಕನ್ಫರ್ಮಿಂಗ್ ಪಾರ್ಟಿ ಆದ ನಮಗೆ 10 ಲಕ್ಷ ರೂ. ಮುಟ್ಟಿರುತ್ತದೆ ಎಂದು ತೋರಿಸಲಾಗಿದೆ ಎಂದರೆ ನಿಜ. ನಿಡಿ-1 ನ್ನು ಮಾಡಿಕೊಡುವಾಗ ಅದರ ಜೊತೆ ನಾವು ದಿನಾಂಕ 12-09-2018 ರ ವಾದಿ ಕಂಪನಿಯ ರಿಜಲೂಷನ್ ಅನ್ನು ಅದಕ್ಕೆ ಲಗತ್ತಿಸಿರುತ್ತೇವೆ ಎಂದರೆ ನಿಜ. ನಿಡಿ-1 ರ ಪಕ್ಷಗಾರರಾದ ಸುವರ್ಣಮ್ಮ ರವರು ಈ ದಾವೆಯ 4 ನೇ ಪ್ರತಿವಾದಿಯ ಹೆಂಡತಿ ಎಂದರೆ ನಿಜ. 4 ನೇ ಪ್ರತಿವಾದಿ ವಾದಿ ಕಂಪನಿಯ ಫೆಸಿಲಿಟೇಟರ್ ಆಗಿ ಕೆಲಸ ಮಾಡುತ್ತಾರೆ ಎಂದರೆ ನಿಜ. ನಿಡಿ-1 ರ ಜಮೀನು ಈಗ ಯಾರ ಹೆಸರಿನಲ್ಲಿ ಇರುತ್ತದೆ ಗೊತ್ತಿಲ್ಲ. ನಿಡಿ-1 ರ ಪಕ್ಷಗಾರರಾದ ಕೆ. ಸತೀಶ್ ತಂದೆ ಭಾಸ್ಕರರಾವ್ ರವರೇ ವಾದಿ ಕಂಪನಿಯ ಪರವಾಗಿ ನಿಡಿ-1 ರ ಜಮೀನಿನ ಬಗ್ಗೆ ಅಗ್ರೀಮೆಂಟ್‌ನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. ಸಾಕ್ಷಿಗೆ ಈಗ ದಿನಾಂಕ 25-07-2016 ರ ನೋಂದಾಯಿತ ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಕೆ.ಸತೀಶ್ ರವರೇ ಮಾಡಿಕೊಟ್ಟಿದ್ದು ಅದು 35,08,375/- ಹಣವನ್ನು ಒಳಗೊಂಡಿರುತ್ತದೆ ಎಂದು ನೋಡಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ಕ್ಕೆ ವಾದಿ ಕಂಪನಿಯ ಪರವಾಗಿ ಪ್ರತಾಪ್ ಸತಿಶ್‌ಬಾಯ್ ಬೋಜಣಿ ಎಂಬುವವರು ಸಹಿ ಮಾಡಿರುತ್ತಾರೆ. ಪ್ರತಾಪ್ ಸತಿಶ್‌ಬಾಯ್ ಬೋಜಣಿ ಅವರಿಗೆ ಪ್ರತಾಪ್ ಸತಿಶ್‌ಬಾಯ್ ಬೋಜಾಣಿ ಎಂತಲೂ

ಕರೆಯುತ್ತಾರೆ ಎಂದರೆ ನಾವು ಪ್ರತಾಪ್ ಸತಿಶ್‌ಬಾಯ್ ಬೋಜಣಿ ಎಂದು ಕರೆಯುತ್ತೇವೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಡಿ-1 ರ 12 ನೇ ಪುಟವನ್ನು ತೋರಿಸಲಾಗಿ ಅದರಲಿಲ ಕನ್ಫರ್ಮಿಂಗ್ ಪಾರ್ಟಿ ಆಗಿ ತಾವೇ ಸಹಿ ಮಾಡಿರುವುದಾಗಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಡಿ-1 ರ ಪಕ್ಷಗಾರರಾದ ಸುವರ್ಣಮ್ಮ ರವರು ನಿಡಿ-1 ರ ಜಮೀನನ್ನು ಗೊಟ್ಟಿಮುಕುಲ ವೆಂಕಟಸುಬ್ಬಾ ಸೋಮರಾಜು ತಂದೆ ಗೊಟ್ಟಿಮುಕುಲ ರಾಮೂರ್ತಿ ರಾಜು ಎಂಬುವವರಿಗೆ 23,77,000/- ರೂ. ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಾವು ಸುವರ್ಣಮ್ಮ ರವರಿಗೆ ಹೇಗೆ ಮಾರಾಟ ಮಾಡಿದೆವೆಯೋ ಅದೇರೀತಿ ಅವರು ತಮಗೆ ಗೊತ್ತಿದ್ದವರಿಗೆ ಜಮೀನನ್ನು ಮಾರಾಟ ಮಾಡಿರಬಹುದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಿನಾಂಕ 20-02-2021 ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಸುವರ್ಣಮ್ಮ ರವರು ಗೊಟ್ಟಿಮುಕುಲ ವೆಂಕಟಸುಬ್ಬಾ ಸೋಮರಾಜು ರವರಿಗೆ ಮಾಡಿಕೊಟ್ಟಿರುವುದಾಗಿ ಸಾಕ್ಷಿ ನೋಡಿ ಒಪ್ಪಿದ್ದರಿಂದ ಕ್ರಯಪತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-1 ಆಗುವಾಗ ಅದರ ಜೊತೆ ಲಗತ್ತಿಸಿದ ಕಂಪನಿ ರೆಜಲೂಷನ್‌ಗೆ ಸಹಿ ಮಾಡಿದ ಜತಿಂದರ್ ಬನಸಾಲ್ ರವರು ವಾದಿ ಕಂಪನಿಯ ಆ್ಯಡಿಷನಲ್ ಡೈರಕ್ಟರ್ ಆಗಿ ಕೆಲಸ ಮಾಡುತ್ತಿರಲಿಲ್ಲ ಮತ್ತು ವಾದಿ ಕಂಪನಿಯಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ದಿನಾಂಕ 25-07-2016 ರ ನೋಂದಾಯಿತ ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಪಡದಪ್ಪ ಹಾಗೂ ವಾದಿ ಕಂಪನಿ ಮತ್ತು 4 ನೇ ಪ್ರತಿವಾದಿ ರವರ ಮಧ್ಯೆ ಆಗಿರುತ್ತದೆ ಎಂದು ಸಾಕ್ಷಿ ನೋಡಿ ಒಪ್ಪಿದ್ದರಿಂದ ಕ್ರಯದ ಕರಾರು ಪತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು. ನಿಡಿ-4 ಕ್ಕೆ ವಾದಿ ಕಂಪನಿಯ ಪರವಾಗಿ ಪ್ರತಾಪ್ ಸತಿಶ್‌ಬಾಯ್ ಬೋಜಣಿ ರವರು ಸಹಿ ಮಾಡಿರುತ್ತಾರೆ. ನಿಡಿ-2 ಮತ್ತು 4 ಆಗುವಾಗ ಪ್ರತಾಪ್ ಸತಿಶ್‌ಬಾಯ್ ಬೋಜಣಿ ರವರು ವಾದಿ ಕಂಪನಿಯಲ್ಲಿ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದರು. ಮಹೇಶ ದೊರನಹಳ್ಳಿ ಎಂಬುವವರು ವಾದಿ ಕಂಪನಿಯಲ್ಲಿ ಪ್ರೊಜೆಕ್ಟ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದು ಈಗ ಅವರು ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ. ಮಹೇಶ ದೊರನಹಳ್ಳಿಯವರು 2018 ರಲ್ಲಿ ನಮ್ಮ ಕಂಪನಿಯನ್ನು ಬಿಟ್ಟಿರುತ್ತಾರೆ. ಸಾಕ್ಷಿಗೆ ಈಗ ದಿನಾಂಕ 03-10-2019 ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ನಿಡಿ-4 ರ ಪಕ್ಷಗಾರರಾದ ಪಡದಪ್ಪ ರವರು ನಿಡಿ-4 ರ ಜಮೀನನ್ನು ಮಹೇಶ ದೊರನಹಳ್ಳಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಡಿ-1 ನ್ನು ಮಾಡಿಕೊಟ್ಟ ರೀತಿಯಲ್ಲಿಯೇ ಇದನ್ನು ಸಹ ಮಾಡಿಕೊಡಲಾಗಿದೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಕ್ರಯಪತ್ರವನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ವಾದಿ ಕಂಪನಿ ಪಕ್ಷಗಾರರು ಇರುವುದಿಲ್ಲ ಎಂದರೆ ನಿಜ. ಸಾಕ್ಷಿಗೆ ಈಗ ದಿನಾಂಕ 09-12-2020 ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು

ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿ ಜಮೀನು ಬೇರೆಯವರಿಗೆ ಮಾರಾಟ ಆಗಬಾರದು ಎಂದು ಮಾರಾಟ ಮಾಡಲಾಗಿದೆ ಎಂದು ಸಾಕ್ಷಿ ಕ್ರಯಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ನಿಡಿ-6 ನ್ನು ಈ ದಾವೆಯ 4 ನೇ ಪ್ರತಿವಾದಿಯ ಪರವಾಗಿ ಮಾಡಲಾಗಿದೆ ಎಂದರೆ ನಿಜ. ಸಾಕ್ಷಿ ನಿಡಿ-6 ರಲ್ಲಿಯ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸರ್ವೆ ನಂಬರ 89/*/2 ವಿಸ್ತೀರ್ಣ 7 ಎಕರೆ 12 ಗುಂಟೆ ಜಮೀನು ಈಗ ಯಾರ ಹೆಸರಿನಲ್ಲಿ ಇರುತ್ತದೆ ಗೊತ್ತಿಲ್ಲ. 4 ನೇ ಪ್ರತಿವಾದಿ ನಿಡಿ-6 ರ ಜಮೀನನ್ನು ಪೆನುಮತ್ಸಾ ವೆಂಕಟಪತಿ ರಾಜು ತಂದೆ ಪಿ. ಅಪ್ಪಾಲರಾಜು ರವರಿಗೆ ದಿನಾಂಕ 23-09-2021 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ತಮಗೆ ಗೊತ್ತಿರುವವರಿಗೆ ಮಾರಾಟ ಮಾಡಿರಬಹುದು ಎಂದು ಹೇಳುತ್ತಾರೆ. ಮೇಲ್ಕಂಡವರಿಗೆ ಜಮೀನುಗಳನ್ನು ಮಾರಾಟ ಮಾಡುವ ಉದ್ದೇಶ ಆ ಜಮೀನುಗಳು ಬೇರೆಯವರಿಗೆ ಮಾರಾಟ ಆಗಬಾರದು ಎಂದು ಹೇಳುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು, 4 ನೇ ಪ್ರತಿವಾದಿ ಹಾಗೂ ಮಹೇಶ ದೊರನಹಳ್ಳಿ ಸೇರಿ ವಂಚನೆ ಮಾಡಿ ಕ್ರಯಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ನಮ್ಮ ವೈಯಕ್ತಿಕ ಲಾಭಕ್ಕಾಗಿ ವಾದಿ ಕಂಪನಿಗೆ ಸಂಬಂಧ ಇಲ್ಲದವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಕಂಪನಿಗೆ ಸಂಬಂಧ ಇಲ್ಲದವರಿಗೆ ಜಮೀನುಗಳನ್ನು ಮಾರಾಟ ಮಾಡಿ ನಾವು ವೈಯಕ್ತಿಕ ಲಾಭ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ದೇವದುರ್ಗ ತಾಲೂಕಿನಲ್ಲಿ 20 ಮೆಗಾ ವ್ಯಾಟ್ ಪ್ರೊಜೆಕ್ಟನ್ನು ಜಾರಿಗೊಳಿಸುವುದಕ್ಕೂ ಮತ್ತು ನಿಡಿ-1 ರಿಂದ 6 ನ್ನು ಮಾಡಿಕೊಂಡಿರುವುದಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲೀಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.